**CW : 1**
PW : 1

## CC No.406/2023

ದಿನಾಂಕ:**24.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ಘಟನೆ ನಡೆದಿ ದಿನ ನಾನು ಪಾಣಾಜೆ ಗ್ರಾಮದ ಕೊಳ್ಳಿಂಬಳ ಕಲ್ಲಪದವು ರಸ್ತೆಯಲ್ಲಿ ಹೋಗುತ್ತಿದ್ದೆ. ಆರೋಪಿತರು ಆ ದಿನ ಅಲ್ಲೇ ಇದ್ದರು. ಘಟನೆ 4.10.2015 ರಂದು ಬೆ.10.00 ರಿಂದ 11 ರ ಸಮಯದಲ್ಲಿ ಆಗಿರುತ್ತದೆ. ಘಟನೆ ಆದ ಸಮಯದಲ್ಲಿ ಅಲ್ಲಿ ಮಣ್ಣು ರಸ್ತೆ ಇತ್ತು.

ನನ್ನ ಮನೆ ಪಾಣಾಜೆ ಗ್ರಾಮದ ಆರ್ಲಪದವು ಎಂಬಲ್ಲಿ ಬರುತ್ತದೆ. ನನ್ನ ಮನೆಯಿಂದ ಘಟನೆಯಾಯಿತು ಎನ್ನುವ ಸ್ಥಳಕ್ಕೆ ಒಳದಾರಿಯಿಂದ ಬಂದರೆ 1 ವರೆ ಕಿ ಮೀ ದೂರ ಇದ್ದು ಮುಖ್ಯ ರಸ್ತೆಯಿಂದ ಬಂದರೆ 4 ಕಿ ಮೀ ದೂರವಾಗುತ್ತದೆ. ನನ್ನ ತೋಟದಿಂದ ಆರೋಪಿತರ ತೋಟ ಸುಮಾರು 2 ಫರ್ಲಾಂಗ್ ದೂರ ಇರುತ್ತದೆ. ನಮ್ಮ ಮತ್ತು ಆರೋಪಿತರ ತೋಟದ ಮದ್ಯದಲ್ಲಿ ರಸ್ತೆ ಬರುತ್ತದೆ. ಆ ರಸ್ತೆ ನಮಗೆ ಸೇರಿರುತ್ತದೆ. ಆ ರಸ್ತೆಯ ಸಂಬಂಧಿತವಾಗಿ ನನ್ನ ಮತ್ತು ಆರೋಪಿತರ ನಡುವೆ ವೈಮನಸ್ಸು ಇರುತ್ತದೆ. ರಸ್ತೆಯ ವಿವಾದಕ್ಕೆ ಸಂಬಂಧಿಸಿದಂತೆ ನಾನು ಆರೋಪಿತರ ವಿರುದ್ದ ಸಿವಿಲ್ ದಾವೆ ಹೂಡಿಲ್ಲ. ನಾನು ಆ ದಿನ ತೋಟಕ್ಕೆ ಬಂದು ಕೆಲಸ ಮಾಡಿಸುತ್ತಿದ್ದೆ. ನಾನು 2 ದಿವಸಕ್ಕೊಮ್ಮೆ ನನ್ನ ತೋಟ ನೋಡಲು ಹೋಗುತ್ತಿದ್ದೆ. ಈ ಕೇಸಿಗೆ ಸಂಬಂಧಿಸಿದಂತೆ ಆರೋಪಿತರ ವಿರುದ್ದ ಇದಕ್ಕೂ ಮೊದಲು ನಾನು ದೂರು ದಾಖಲು ಮಾಡಿದ್ದು ಆ ದೂರಿನ ಪ್ರಕಾರ ತನಿಖೆ ನಡೆದು ಸಿಸಿ ನಂ.1132/2017 ಎಂದು ದೋಷಾರೋಪಣಾ ಪತ್ರದ ಮೇಲೆ ಕೇಸು ದಾಖಲಾಗಿತ್ತು. ಆ ಕೇಸಿನಲ್ಲಿ ಆರೋಪಿತರು ಖುಲಾಸೆಯಾಗಿದ್ದಾರೆಂದರೆ ಸರಿ. ಆ ತೀರ್ಪಿನ ವಿರುದ್ದ ಒಬ್ಬ ಆರೋಪಿತನ ವಿರುದ್ಧ ಮಾನ್ಯ ಗೌರವಾನ್ವಿತ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆನು. ಸದರಿ ಮೇಲ್ಮನವಿ ವಜಾ ಆಗಿದ್ದು ಆ ಆದೇಶದ ವಿರುದ್ದ ನಾನು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ. ನಾನು ಸಲ್ಲಿಸಿದ್ದ ಮೇಲ್ಮನವಿಯ ನೋಟೀಸ್ ನನಗೆ ಬಂದಿಲ್ಲ. ಇದೇ ಘಟನೆಗೆ ಸಂಬಂಧಿಸಿದಂತೆ ನಾನು ಖಾಸಗಿ ಫಿರ್ಯಾದನ್ನು ಸಲ್ಲಿಸಿದ್ದೇನೆಂದರೆ ಸರಿ. ಆರೋಪಿತರ ವಿರುದ್ದ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿತರು ಖುಲಾಸೆಯಾಗಿದ್ದು ಅದರ ತೀರ್ಪಿನ ಮೇಲೆ ಸಲಪಿಸ್ಲಿದ್ದ ಮೇಲ್ಮನವಿ ಕೂಡಾ ವಜಾ ಆಗಿರುವ ಕಾರಣ ಪ್ರಸ್ತುತ ಖಾಸಗಿ ಫಿರ್ಯಾದನ್ನು ನಾನು ಸಲ್ಲಿಸಲು ಅರ್ಹನಲ್ಲ ಎಂದರೆ ಸರಿಯಲ್ಲ.

**CW : 1**
PW : 1

ನಾನು ಒಟ್ಟು 5 ಜನರ ವಿರುದ್ಧ ಖಾಸಗಿ ಫಿರ್ಯಾದು ಸಲ್ಲಿಸಿದ್ದೇನೆ. 4 ನೇ ಆರೋಪಿಯ ಹೆಸರು ಸಫಿಯಾ. 4 ನೇ ಆರೋಪಿ ಜೀವಬೆದರಿಕೆ ಹಾಕಿರುತ್ತಾರೆ ಎಂದು ಫಿರ್ಯಾದಿನಲ್ಲಿ ನಮೂದಿದೆ. ಅನ್ವರ್ ಸಾದಿಕ್ ಪಲ್ಲಮಜಲು ಗ್ರಾಮದವರಾಗಿದ್ದು ಮತ್ತು ಇಸುಬು ಆರ್ಲಪದವು ವಾಸಿಯಾಗಿದ್ದಾರೆ. ಅನ್ವರ್ ಸಾದಿಕ್ ನನಗೆ ಪರಿಚಯದವರು. 2 ನೇ ಆರೋಪಿ ನನ್ನ ತಲೆಯ ಮುಂಬಾಗಕ್ಕೆ ಹೊಡೆದಿದ್ದಾರೆ, ನನ್ನ ಫಿರಾ್ಯದುವಿನಲ್ಲಿ ಆ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಪಿರ್ಯಾದು ಸಲ್ಲಿಸುವಾಗ ಕನ್ಫ್ಯೂಸ್ ಆಗಿರಬೇಕು ಎಂದು ನುಡಿಯುತ್ತಾರೆ. ಮೊದಲನೇ ಆರೋಪಿ ಇಸುಬು ನನ್ನ ಬಲಗೈಗೆ ತಾಗಿಸಿರುತ್ತಾರೆ. ನನ್ನ ದೂರಿನಲ್ಲಿ ಬಲಗೈಗೆ ತಾಗಿರುವ ಸಂಬಂದ ನಮೂದು ಇಲ್ಲ ಎಂದರೆ ಸರಿಯಲ್ಲ. ನಾನು ಬೋರಲಾಗಿ ಬಿದ್ದಿದ್ದೆನು. ಆರೋಪಿತರಾದ ಮೊಹಮದ್ ಕಲಂದರ್ ಮತ್ತು ಅಬ್ದುಲ್ ರಜಾಕ್ ನನ್ನ ಎಲ್ಲಾ ಬೆರಳುಗಳ ಮೇಲೆ ತುಳಿದಿದ್ದಾರೆ. ಗಲಾಟೆ ನಡೆಯುವಾಗ 4 ನೇ ಆರೋಪಿ ಸ್ಥಳದಲ್ಲಿ ಇದ್ದರು. ಘಟನೆ ಆಗುತ್ತಿರಬೇಕಾದರೆ ನಾನು ಬೊಬ್ಬೆ ಹಾಕಿದ್ದೆ.

ಈ ಹಂತದಲ್ಲಿ ಮಾನ್ಯ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.